ಇನ್ನೊಂದು ನಗರಕ್ಕೆ ಹೋಗಿ ತಮ್ಮ ನೆಲೆಯನ್ನು ಕಂಡುಕೊಳ್ಳುತ್ತಿದ್ದರು. ಯೌವನಕ್ಕೆ ಕಾಲಿಟ್ಟ ಮೊಹಲ್ಲಾದ ಪ್ರತಿಯೊಬ್ಬ ಯುವತಿ, ರಾಮ್ ಕೌಲರ ಮನೆಯಲ್ಲಿ ವಿವಾಹದ ಸಂತಸವನ್ನು ಅನುಭವಿಸಿ, ತಾನು ಪಲ್ಲಕ್ಕಿಯಲ್ಲಿ ಅಥವಾ ಕಾರಿನಲ್ಲಿ ಕೂತು, ತನ್ನ ತವರನ್ನು ತ್ಯಜಿಸಿ, ತನ್ನ ಜೀವನ ಸಂಗಾತಿಯೊಂದಿಗೆ ಒಂದು ಹೊಸ ಪರಿವಾರದಲ್ಲಿ ಕೂಡಿಕೊಳ್ಳುವ ಗಳಿಗೆಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದಳು. ಈ ಸಂಗತಿಗಳು ನೆನಪಾಗುತ್ತಲೇ ಶ್ರೀಕಂಠನ ಮೆದುಳಿನಲ್ಲಿ ಆ ಪೇಂಟಿಂಗ್‌ನಲ್ಲಿದ್ದ ದೂರದೂರದವರೆಗೆ ಚಾಚಿದ್ದ ಕೊಂಬೆಗಳ ಮತ್ತು ಬೇರುಗಳು ಒಣಗಿದ್ದ ಆ ವಿಶಾಲ ವೃಕ್ಷ ಮತ್ತೆ ಮತ್ತೆ ಮೂಡುತ್ತಿತ್ತು.

ಕಳೆದ ವರ್ಷ ಅವನು ನಿವೃತ್ತನಾದಾಗ, ತಾನು ಉಳಿದ ದಿನಗಳನ್ನು ಕಾಶ್ಮೀರದಲ್ಲಿ ಕಳೆಯುವುದಾಗಿ ಯೋಚಿಸಿದ್ದ. ಆದರೆ, ಪರಿಸ್ಥಿತಿಗಳು ಅವನಿಗೆ ಸಹಕರಿಸಲಿಲ್ಲ. ತನ್ನಿಚ್ಛೆಗೆ ವಿರುದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಯಿತು. ಇಂದಿಗೆ ಇಪ್ಪತ್ತು ದಿನಗಳ ಹಿಂದೆ ಅವನು ಕೋಲ್ಕತ್ತಕ್ಕೆ ಬರಲು ರೈಲಿನಲ್ಲಿ ಕೂತಿದ್ದಾಗ, ಯಮದೂತರು ತನ್ನನ್ನು ಹಿಡಿದು ಕರೆದೊಯ್ಯುತ್ತಿದ್ದಾರೆ, ಒಬ್ಬ ಯಮದೂತ ಅವನ ಬಲಗೈಯನ್ನು, ಇನ್ನೊಬ್ಬ ಯಮದೂತ ಅವನ ಎಡಗೈಯನ್ನು ಹಿಡಿದು ಅವನನ್ನು ಉರಿಯುವ ಬೆಂಕಿಯಲ್ಲಿ ನಡೆಸುತ್ತಿದ್ದಾರೆ ಎಂದು ಅನ್ನಿಸಿತ್ತು. ಇಲ್ಲಿಗೆ ಬಂದಾಗ ಸುಡುವ ಬಿಸಿಲು ಮತ್ತು ಕೋಲಾಹಲ ಅವನ ಈ ಪ್ರಜ್ಞೆಯನ್ನು ತೀವ್ರಗೊಳಿಸಿತ್ತು. ಅವನಿಗೆ ಕೂಪ ಮಂಡೂಕದಂತಿದ್ದ ಶ್ರೀಕಂಠನೇ ಒಳ್ಳೆಯವನಾಗಿದ್ದನೆಂಬ ಯೋಚನೆ ಬರುತ್ತಿತ್ತು. ಇನ್ನು ಕಾಶ್ಮೀರಕ್ಕೆ ಹೋಗುವುದು ತನ್ನ ಹಣೆಯಲ್ಲಿ ಬರೆದಿಲ್ಲ, ಅಲ್ಲಿ ತನ್ನ ಅನ್ನದ ಋಣ ಕೊನೆಗೊಂಡಿದೆ ಎಂಬ ಸತ್ಯ ಅವನಿಗೆ ತಿಳಿದಿತ್ತು.

ಒಂದು ವಿಚಿತ್ರ ವೇದನೆ ಅವನ ನರ ನಾಡಿಗಳಲ್ಲಿ ವ್ಯಾಪಿಸಿತ್ತು. ಅವನು ಕಳೆದ ಕೆಲವು ದಿನಗಳಿಂದ ತನ್ನ ಸಹೋದರನ ಪತ್ರಕ್ಕಾಗಿ ಕಾಯುತ್ತಿದ್ದ. ಆದರೆ, ಇದುವರೆಗೆ ಅವನ ಪತ್ರ ಬರಲಿಲ್ಲ, ಅವನ ಬಗ್ಗೆಯೂ ತಿಳಿಯಲಿಲ್ಲ. ಆದರೂ ಅವನಿಗೆ ತನ್ನ ಸಹೋದರ ಇನ್ನು ಎಂಟು–ಹತ್ತು ದಿನದೊಳಗೆ 'ಹೂಂ' ಅಥವಾ 'ಇಲ್ಲ' ಎಂದು ಪತ್ರ ಬರೆಯುತ್ತಾನೆಂಬ ವಿಶ್ವಾಸವಿತ್ತು. ನಂತರ ತಾನು ತನ್ನ ಅಳಿಯನಿಗೆ ತಂತಿ ಕಳುಹಿಸುತ್ತೇನೆ, ಅವನೆಲ್ಲಾ ಕೆಲಸಗಳನ್ನು ಪೂರೈಸುತ್ತಾನೆ, ಇದರಿಂದಾಗಿ ಕೊನೆಯ ಸಮಸ್ಯೆಯೂ ಪರಿಹಾರವಾಗುತ್ತದೆ, ತಾನು ನೆಮ್ಮದಿಯಿಂದ ಪ್ರಾಣವನ್ನು ತ್ಯಜಿಸುತ್ತೇನೆ ಎಂದು ಯೋಚಿಸಿದ್ದ. ಆದರೆ, ಸಹೋದರನ ಪತ್ರವೇ ಬರುತ್ತಿರಲಿಲ್ಲ.

'ಆರೋಗ್ಯವಾಗಿದ್ದಾನೋ, ಇಲ್ಲವೋ?' ಎಂದು ಯೋಚಿಸಿ ಶ್ರೀಕಂಠನ ಮನಸ್ಸು ಚಂಚಲಗೊಂಡಿತು, 'ಒಂದು ವೇಳೆ ಇಂದೂ ಪತ್ರ ಬರದಿದ್ದರೆ, ತಂತಿ ಕಳುಹಿಸಬೇಕಾಗುವುದು. 'ತಾನು ಒಳಗೊಳಗೇ ಉರಿದು ಈಗ ಆರಿ ಹೋಗಿದ್ದೇನೆ, ಯಾರೆದುರು ನನ್ನ ದುಃಖವನ್ನು ಹೇಳಿಕೊಳ್ಳಲಿ?' ಎಂದು ಯೋಚಿಸಿ ಶ್ರೀಕಂಠ ನಿಟ್ಟುಸಿರು ಬಿಟ್ಟ.

ಶ್ರೀಕಂಠನಿಗೆ ಮೂವರು ಸಹೋದರರಿದ್ದರು. ಒಬ್ಬ ಬಾಲ್ಯದಲ್ಲೇ ಸತ್ತು ಹೋಗಿದ್ದ. ಎರಡನೆಯವನು ದಿಲ್ಲಿಯಲ್ಲಿ ದೊಡ್ಡ ಅಧಿಕಾರಿಯಾಗಿದ್ದ, ಅಲ್ಲಿಯೇ ಒಂದು ಭವ್ಯ ಬಂಗ್ಲೆಯನ್ನು ಕಟ್ಟಿಸಿದ್ದ. ಅವನ ಕೃಪೆಯಿಂದಲೇ ಶ್ರೀಕಂಠನ ಮೂವರು ಮಕ್ಕಳು ಸಹ ಜಯಪುರ, ಬೆಂಗಳೂರು ಮತ್ತು ಕೋಲ್ಕತ್ತಾದಲ್ಲಿ ಎರಡು ಹೊತ್ತಿನ ಅನ್ನ ಗಳಿಸಲು ಯೋಗ್ಯವಾಗಿದ್ದರು. ಶ್ರೀಕಂಠನ ಮೂರನೆಯ ಸಹೋದರ ನಾಥಜಿ ಶಾಲಾ ಮಾಸ್ತರನಾಗಿದ್ದು ಕಾಶ್ಮೀರದಲ್ಲೇ ವಾಸಿಸುತ್ತಿದ್ದ. ಅವನು ಪೆನ್ಷನ್ ಪಡೆಯಲು ಇನ್ನೂ ಐದಾರು ವರ್ಷಗಳಿದ್ದವು. ಅವನು ಮನೆ ಪಾಠ ಹೇಳಿ ತನ್ನ ಪರಿವಾರದ ಗಾಡಿಯನ್ನು ಹೇಗೋ ಹೊಡೆಯುತ್ತಿದ್ದ.

ಶ್ರೀಕಂಠನ ಹೆಂಡತಿ ಎರಡು ವರ್ಷಗಳ ಹಿಂದೆಯೇ ನಿಧನಳಾಗಿದ್ದಳು. ಅಂದಿನಿಂದ ಅವನು ನಾಥಜಿಯ ಮನೆಯಲ್ಲಿಯೇ ಊಟ ಮಾಡುತ್ತಿದ್ದು, ತನ್ನ ತಮ್ಮನಿಗೆ ತನ್ನ ಖರ್ಚಿನ ಬಾಬ್ತನ್ನು ಕೊಡುತ್ತಿದ್ದ. ಅದೊಂದು ದಿನ ಇಬ್ಬರು ಸಹೋದರರು ಮೂರನೆಯ ಜಾವದ ಚಹಾ ಕುಡಿಯುತ್ತಿರುವಾಗ ಶ್ರೀಕಂಠ ನಾಥಜಿಗೆ ಹೇಳಿದ, "ನೋಡು, ನಾನಿವತ್ತು ಟಿಕೇಟ್ ತಂದಿದ್ದೇನೆ. ನಾಡಿದ್ದು ಜಮ್ಮುಗೆ ಹೋಗುತ್ತೇನೆ, ಅಲ್ಲಿಂದ ಮರುದಿನ ಕೋಲ್ಕತ್ತಕ್ಕೆ ಬರ್ತೀನಿ."

"ಏಕೆ, ಅಲ್ಲಿ ಎಲ್ಲರೂ ಕ್ಷೇಮ ತಾನೇ?" ನಾಥಜಿ ಸ್ವಲ್ಪ ಹೆದರಿ ಕೇಳಿದ.

"ಹೂಂ, ಎಲ್ಲರೂ ಕ್ಷೇಮವಾಗಿದ್ದಾರೆ. ಆದರೆ, ನಿಜ